ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು

ಸಿ.ಸಿ. ನಂಃ **332/2023**

ಪಿರ್ಯಾದಿ : ಡಿ.ಎಸ್ ಟೋಪೇಗೌಡ .
ಃಬಿನ್ಃ ಸಗನೇಗೌಡ,
**60** ವರ್ಷ, ಕುರಿಪುಟ್ಟೇಗೌಡರ ಬೀದಿ,
ಗೆಂಡೇಹಳ್ಳಿ ರಸ್ತೆ, ಬೇಲೂರು ಟೌನ್,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ಆರೋಪಿ : ಅನಿತಾ ಹೆಚ್.ಎಸ್.
ಃಕೋಂಃ ಚೇತನ್,
**35** ವರ್ಷ, ಶಂಭುಗನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

## ಃ ಆರೋಪಣೆಯ ಸಾರಾಂಶ ಃ

ಪಿರ್ಯಾದಿ ಮತ್ತು ಆರೋಪಿಯಾದ ನೀನು ತುಂಬಾ ಪರಿಚಯದವರಾಗಿದ್ದು, ದಿನಾಂಕಃ 23.11.2022 ರಂದು ಆರೋಪಿಯಾದ ನೀನು ಪಿರ್ಯಾದುದಾರನ ಮನೆಗೆ ಬಂದು ತನ್ನ ಸಂಸಾರಕ್ಕಾಗಿ ಮಾಡಿರುವ ಕೈಸಲಾವನ್ನು ತೀರಿಸುವ ಉದ್ದೇಶದಿಂದ ರೂ.4,00,000/- ರೂಗಳ ಹಣದ ಅವಶ್ಯಕತೆ ಇದೆ ಕೊಡಿ ಎಂದು ಪಿರ್ಯಾದುದಾರರನ್ನು ಕೇಳಿದ್ದು, ಆರೋಪಿಯಾದ ನಿನ್ನ ಕೋರಿಕೆಯನ್ನು ಮನ್ನಿಸಿ ಅಂದೇ ನಗದಾಗಿ ರೂ.4,00,000/-ಗಳನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ಮುಂದಿನ ದಿನಾಂಕದಲ್ಲಿ ಪಿರ್ಯಾದುದಾರರು ಹೊಂದುವಂತೆ ಆರೋಪಿಯಾದ ನೀನು ಖಾತೆ ಹೊಂದಿರುವ ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್, ಚಿಕ್ಕಮಗಳೂರು ಶಾಖೆಯ ಚೆಕ್ ನಂಃ000002 ರಲ್ಲಿ ರೂ.4,00,000/- ರೂಪಾಯಿಗಳನ್ನು ನಮೂದಿಸಿ ದಿನಾಂಕಃ13.01.2023 ರಂದು ಅಥವಾ ನಂತರ ಮೇಲ್ಕಂಡ ಬ್ಯಾಂಕ್ ಗೆ ಹಾಜರಿಸಿ ಹಣ ಪಡೆದುಕೊಳ್ಳುವಂತೆ ತಿಳಿಸಿ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತಾರೆ. ಆದ್ದರಿಂದ ಪಿರ್ಯಾದುದಾರನು ಸದರಿ ಚೆಕ್‌ನ್ನು ನಗಧೀಕರಿಸುವ ಉದ್ದೇಶದಿಂದ ಪಿರ್ಯಾದುದಾರನು ತಾನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಅಫ್ ಇಂಡಿಯಾ, ದೇವಸ್ಥಾನದ ರಸ್ತೆ,, ಬೇಲೂರು ಶಾಖೆಯ ಮೂಲಕ ಹಾಜರಿಸಲಾಗಿ ಪಿರ್ಯಾದಿ ಬ್ಯಾಂಕಿನವರು ಆರೋಪಿಯಾದ

ನಿನ್ನ ಖಾತೆಯನ್ನು ಪರಿಶೀಲಿಸಿದಾಗ, ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹವನ್ನು ಚೆಕ್‌ನೊಂದಿಗೆ ಹಿಂಬರಹವನ್ನು ದಿನಾಂಕಃ 21.01.2023 ರಂದು ವಾಪಸ್ಸು ನೀಡಿರುತ್ತಾರೆ. ಆರೋಪಿಯಾದ ನೀನು ಕೊಟ್ಟ ಚೆಕ್ಕು ನಗದಾಗದೇ ವಾಪಸ್ ಬಂದ ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ 07.02.2023 ರಂದು ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟಿಸ್‌ನ್ನು ಆರೋಪಿಯಾದ ನೀನಗೆ ಜಾರಿ ಮಾಡಿದ್ದು, ಆದರೆ ಸದರಿ ನೋಟೀಸ್ ಅನ್ನು ಆರೋಪಿಯಾದ ನೀನು ತೆಗೆದುಕೊಳ್ಳದೇ ದಿನಾಂಕಃ 14.02.2023 ರಂದು ತಿರಸ್ಕರಿಸಿರುತ್ತೀರಿ. ಸದರಿ ತಿಳುವಳಿಕೆ ಪತ್ರದ ಬಗ್ಗೆ ಆರೋಪಿಯಾದ ನಿನಗೆ ತಿಳಿದರೂ ಸಹ ಇದೂವರೆಗೂ ಯಾವುದೇ ಉತ್ತರವನ್ನಾಗಲೀ, ಹಣವನ್ನಾಗಲೀ ಪಿರ್ಯಾದುದಾರನಿಗೆ ನೀಡಿರುವುದಿಲ್ಲ. ಆರೋಪಿಯಾದ ನೀನು ನಿನ್ನ ಖಾತೆಯಲ್ಲಿ ಚೆಕ್ ಹಣವನ್ನು ಮಾನ್ಯ ಮಾಡುವಷ್ಟು ಹಣವಿಲ್ಲದಿದ್ದರೂ ಪಿರ್ಯಾದಿಗೆ ಚೆಕ್ ಅನ್ನು ನೀಡಿ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಮೋಸ ಮಾಡುವ ಉದ್ದೇಶದಿಂದ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

ಪ್ರಶ್ನೆಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

**ಸ್ಥಳ : ಬೇಲೂರು**
**ದಿನಾಂಕ : 15.01.2025.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಬೇಲೂರು..**